ಮೂಲ ದಾವಾ ಸಂಖ್ಯೆ. 84/2017 ಡಿ ಡಬ್ಲ್ಯೂ 1

(ದಿನಾಂಕ 21-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಪಾಟೀ ಸವಾಲುಃ 2 ಮತ್ತು 3 ನೇ ಪ್ರತಿವಾದಿ ಪರ ಶ್ರೀ ಬಿ ಬಿ ಆರ್ ವಕೀಲರಿಂದಃ-

ನಾನು, ನನ್ನ ಹೆಂಡತಿ ಮತ್ತು ಮಕ್ಕಳು ಒಂದೇ ಕುಟುಂಬದಲ್ಲಿ ಇರುತ್ತೇವೆಂದರೆ ಸರಿ ಸಾಕ್ಷಿ ಮುಂದುವರೆದು ನಾನು ಹೆಂಡತಿಯನ್ನು ಬಿಟ್ಟು ಬೇರೆ ಇರುತ್ತೇನೆನ್ನುತ್ತಾರೆ. ನಾನು ಈಗ 10-12 ವರ್ಷದಿಂದ ಬೇರೆ ಇರುತ್ತೇನೆ. ನಾನು ಬೇರೆಯಾಗಿ ವಾಸವಾಗಿದ್ದೇನೆ ಆದರೆ ನನ್ನ ಹೆಂಡತಿ ಜೊತೆ ಮಾತನಾಡುತ್ತೇನೆ, ವ್ಯವಹಾರವಾದಲ್ಲಿ ನಾನು ಅವಳ ಜೊತೆ ವಿಚಾರ ವಿಮರ್ಶೆ ಮಾಡಿ ವ್ಯವಹಾರ ಮಾಡುತ್ತೇನೆ.

ಸನ್ 2002 ರಲ್ಲಿ ನಾನು ಖರೀದಿಸಿರುವ ಜಮೀನನ್ನು ನಾನೇ ಸ್ವಂತ ಖರೀದಿ ಮಾಡಿರುತ್ತೇನೆ ಎಂದರೆ ಸಾಕ್ಷಿಯು ನನ್ನ ಹೆಂಡತಿ ರೂ.45 ಸಾವಿರ ಹಣವನ್ನು ಸಹಾಯ ಮಾಡಿದ್ದಾಳೆನ್ನುತ್ತಾರೆ. ಖರೀದಿ ಮಾಡಿಕೊಳ್ಳುವ ಸಮಯದಲ್ಲಿ ಜಮೀನನ್ನು ಜಂಟಿಯಾಗಿ ನೊಂದಣಿ ಮಾಡಿಸಿಕೊಳ್ಳಲು ನನಗೆ ಯಾವುದೇ ತೊಂದರೆ ಇರಲಿಲ್ಲ. ಸದರಿ ಜಮೀನನ್ನು ನಾನು ಮಾತ್ರ ಖರೀದಿಸಿದ್ದೇನೆ ಅದಕ್ಕೆ ನನ್ನ ಹೆಂಡತಿ ಯಾವುದೇ ಹಣದ ಸಹಾಯ ಮಾಡಿಲ್ಲವೆಂದರೆ ಸರಿಯಲ್ಲ. ನಾನು ಜಮೀನು ಖರೀದಿಸುವ ಸಮಯದಲ್ಲಿ ನಮ್ಮ ಊರಿನಲ್ಲಿ ಹಾಲಿನ ಡೈರಿ ಇತ್ತು. ಆ ಸಮಯದಲ್ಲಿ ನಮ್ಮ ಮನೆಯಲ್ಲಿ ಧನಕರುಗಳು ಪ್ರತಿದಿನ 10 ಲೀ ಹಾಲನ್ನು ನೀಡುತ್ತಿದ್ದವು. ಸದರಿ ಹಾಲನ್ನು ನಾವು ಡೈರಿಗೆ ಮಾರಾಟ ಮಾಡುತ್ತಿದ್ದೆವು. ನಾವು ಡೈರಿಗೆ ಹಾಲನ್ನು ಮಾರಾಟ ಮಾಡಿದ್ದಲ್ಲಿ ಡೈರಿಯವರು ಆ ಬಗ್ಗೆ ದಾಖಲೆಯನ್ನು ನೀಡುತ್ತಾರೆಂದರೆ ಸರಿ. ಆ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಲು ಯಾವುದೇ ತೊಂದರೆ ಇಲ್ಲ. ನೀವು ಯಾವುದೇ ರೀತಿಯಿಂದಲೂ ಹಾಲನ್ನು ಡೈರಿಗೆ ಮಾರಾಟ ಮಾಡಿಲ್ಲ ಆದ್ದರಿಂದ ಆ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿಲ್ಲವೆಂದರೆ ಸರಿಯಲ್ಲ. ನನ್ನ ಹೆಂಡತಿ ನನ್ನ ಹೆಸರಿನಲ್ಲಿ ಜಮೀನು ಖರೀದಿ ಮಾಡಲು ರೂ.45 ಸಾವಿರಗಳನ್ನು ಕೊಟ್ಟಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ನಮ್ಮ ಕೂಡು ಕುಟುಂಬದ ನಿರ್ವಹಣೆಗಾಗಿ ಆದಾಯಕ್ಕಿಂತ ಖರ್ಚು ಹೆಚ್ಚಿಗೆ ಇತ್ತು. ನನಗೆ ಆರ್ಥಿಕ ಕಷ್ಟ ಇರುವುದರಿಂದ ನಾನು ಖರೀದಿಸಿದ ಆಸ್ತಿಯನ್ನು ಗುರುಶಾಂತಮ್ಮ ಇವರಿಗೆ ಮಾರಾಟ ಮಾಡಿದ್ದೇನೆಂದರೆ ಸರಿ. ನಾನು ಖರೀದಿಸಿದ ಜಮೀನು ಸಂಪೂರ್ಣವಾಗಿ ನನ್ನ ಸ್ವಾಧೀನದಲ್ಲಿತ್ತು ಎಂದರೆ ಸರಿ ಸಾಕ್ಷಿ ಮುಂದುವರೆದು ಜಂಟಿ ಇತ್ತು ಎನ್ನುತ್ತಾರೆ. ನನ್ನ ಹೆಂಡತಿ ಮತ್ತು ನನ್ನ ಹೆಸರಿಗೆ ಜಮೀನು ಜಂಟಿಯಾಗಿ ದಾಖಲಿತ್ತು ಎನ್ನುವ ಬಗ್ಗೆ ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲು ಹಾಜರು ಮಾಡಿಲ್ಲ. ಸನ್ 2016 ರಲ್ಲಿ ಗುರುಶಾಂತಮ್ಮ ಇವರಿಗೆ

ಜಮೀನನ್ನು ಮಾರಾಟ ಮಾಡಿ ಅವರಿಗೆ ಜಮೀನು ಬಿಟ್ಟುಕೊಟ್ಟಿದ್ದು ಆ ಬಗ್ಗೆ ಮ್ಯುಟೇಶನ್ ಸಹಾ ಆಗಿರುತ್ತದೆಂದರೆ ಸರಿ. ಗುರುಶಾಂತಮ್ಮ ಇವರಿಗೆ ನಾನು ಜಮೀನು ಮಾರಾಟ ಮಾಡಿದ ಸಮಯದಲ್ಲಿ ನಾನು ಆರೋಗ್ಯವಾಗಿದ್ದೆ. ಆ ಸಮಯದಲ್ಲಿ ನನಗೆ ದಾವಾ ಜಮೀನು ಬಗ್ಗೆ ಎಲ್ಲಾ ಮಾಹಿತಿ ಇತ್ತು ಎಂದರೆ ಸರಿ. ಗುರುಶಾಂತಮ್ಮ ಇವರು ದಾವಾ ಸ್ವತ್ತನ್ನು 3 ನೇ ಪ್ರತಿವಾದಿಗೆ ದಾನಪತ್ರದ ಮೂಲಕ ಕೊಟ್ಟಿರುತ್ತಾರೆಂದರೆ ಸರಿ. ಸದರಿ ಸುಜಾತಮ್ಮ ಇವರು ದಾವಾ ಸ್ವತ್ತನ್ನು ಸೋಲಾರ್ ಕಂಪನಿಗೆ ಮಾರಾಟ ಮಾಡಿರುತ್ತಾರೆಂದರೆ ಸರಿ. ದಾವಾಸ್ತಿಯನ್ನು ಸೋಲಾರ್ ಕಂಪನಿಯವರು ಸಂಪೂರ್ಣವಾಗಿ ಸ್ವಾಧೀನಪಡೆದುಕೊಂಡು ಅದಕ್ಕೆ ತಂತಿಬೇಲಿ ಹಾಕಿಕೊಂಡಿರುತ್ತಾರೆಂದರೆ ಸರಿ ಸಾಕ್ಷಿ ಮುಂದುವರೆದು ನಾನು 2.56 ಎಕರೆ ಜಮೀನು ಮಾತ್ರ ನೊಂದಣಿ ಮಾಡಿಸಿಕೊಳ್ಳಿ ಅಂತಾ 2 ನೇ ಪ್ರತಿವಾದಿಗೆ ಹೇಳಿದ್ದೆ ಆದರೆ ಅಕ್ರಮವಾಗಿ 2 ನೇ ಪ್ರತಿವಾದಿಯು ಸಂಪೂರ್ಣ ಆಸ್ತಿಯನ್ನು ನೊಂದಣಿ ಮಾಡಿಕೊಂಡಿರುತ್ತಾರೆನ್ನುತ್ತಾರೆ. ದಾವಾ ಜಮೀನು 4.56 ಎಕರೆ ಒಂದೇ ಸರ್ವೆ ನಂಬರ್ ಮತ್ತು ಒಂದೇ ಪ್ಲಾಟ್ ಆಗಿರುತ್ತದೆಂದರೆ ಸರಿ. ನಾನು ಸಂಪೂರ್ಣವಾಗಿ ದಾವಾಸ್ತಿಯನ್ನು 2 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದೇನೆ ಆದರೆ 2 ನೇ ಪ್ರತಿವಾದಿಯು ಅಕ್ರಮವಾಗಿ ಸಂಪೂರ್ಣ ಆಸ್ತಿಯನ್ನು ನೊಂದಣಿ ಮಾಡಿಸಿಕೊಂಡಿರುತ್ತಾಳಂತಾ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಮದುವೆ ಸಮಯದಲ್ಲಿ ಮೆಹರ್ ಹಣವನ್ನು ನನಗೆ ನನ್ನ ಹೆಂಡತಿಗೆ ಕೊಡಲು ಸಾಧ್ಯವಾಗಿರಲಿಲ್ಲ ಆ ನಂತರ ನಾನು 2 ಎಕರೆ ಜಮೀನನ್ನು ನನ್ನ ಹೆಂಡತಿಗೆ ಮೆಹರ್ ರೂಪದಲ್ಲಿ ಕೊಟ್ಟಿರುತ್ತೇನೆ. ಮೆಹರ್ ಪತ್ರ ನಿಪಿ-16 ಕ್ಕೆ ನಮ್ಮ ಧಾರ್ಮಿಕ ಸಂಸ್ಥೆಯವರು ಯಾವುದೇ ಮೊಹರನ್ನು ಹಾಕಿರುವುದಿಲ್ಲ. ಈ ದಾವೆಗೆ ಸಂಬಂಧಿಸಿದಂತೆ ನಿಪಿ-16 ದಾಖಲೆಯನ್ನು ನಾನು ಸೃಷ್ಟಿ ಮಾಡಿಕೊಂಡಿರುತ್ತೇನೆಂದರೆ ಸರಿಯಲ್ಲ. ದಾವಾಸ್ತಿಯನ್ನು ಸಂಪೂರ್ಣವಾಗಿ 2 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದು ಅವರಿಂದ ಹೆಚ್ಚಿನ ಹಣ ಪಡೆಯುವ ದುರುದ್ದೇಶದಿಂದ ನಿಪಿ-16 ದಾಖಲೆಯನ್ನು ಸೃಷ್ಟಿ ಮಾಡಿರುತ್ತೇನೆಂದರೆ ಸರಿಯಲ್ಲ. ಸದರಿ ಸೃಷ್ಟಿ ಮಾಡಿದ ದಾಖಲೆಯಾಧಾರದ ಮೇಲೆ ನನ್ನ ಹೆಂಡತಿಯಿಂದ ಸುಳ್ಳು ದಾವೆ ದಾಖಲಿಸಿ ಅದಕ್ಕೆ ಪೂರಕವಾದ ರೀತಿಯಲ್ಲಿ ಸುಳ್ಳು ಪ್ರತಿವಾದ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷಿ ಪ್ರಮಾಣಪತ್ರವನ್ನು ಹಾಜರುಪಡಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ